ಶ್ರೀ ಟಿ. ತಾರೇಗೌಡ :— ಅದನ್ನು ಎಷ್ಟು ಕಾಲದಲ್ಲಿ ಪೂರೈಸುತ್ತೀರಾ?

ಶ್ರೀ ಹೆಚ್. ಎಂ. ಚನ್ನಬಸಪ್ಪ : .. ಅದಕ್ಕೆ ಟೆಂಡರ್ ಕಾಲಫಾರ್ ಮಾಡಿದ್ದೇವೆ. ಮಾನ್ಯ ಸದಸ್ಯರಿಗೆ ಎಷ್ಟು ಅತುರದಲ್ಲಿ ಮಾಡಬೇಕು ಎಂದು ಇದೆಯೋ ನಮಗೂ ಅಷ್ಟೇ ಅತುರದಲ್ಲಿ ಅದನ್ನು ಮಾಡಬೇಕೆಂದಿದೆ.

**Encouragement for Growing Pineapple*

357. SMT. RADHA BHATT (Ankola) :— Will the Minister of State for Fisheries and Horticulture be pleased to state :—

(*a*) the amount spent so far by the Government for raising the Pineapple plantations in Navanegere of Sirsi Taluk; the number of farms in which this fruit was grown;

(*b*) whether the Government is thinking in terms of granting 1-2 acres of land to the unemployed graduates and entrusting the responsibilities of raising Pineapple crop and taking up on themselves the responsibilities of processing and selling the same?

SR K. T. RATHOD (Minister of State for Fisheries and Horticulture) :—

(*a*) No amount has been spent by the Government for raising Pineapple crop. The financial institutions encourage the growth of Pineapple in Private Sector.

(*b*) No.

ಇದರಲ್ಲಿ ಒಂದು ಕ್ಲಾರಿಫಿಕೇಷನ್ ಇದೆ. ಅದು ಏನೆಂದರೆ ಈ ಹಳ್ಳಿಯಲ್ಲಿ ಒಟ್ಟು 431.7 ಎಕರೆ ಜಮೀನಿನಲ್ಲಿ ಅನಾನಸ್ ಬೆಳೆಸಿದ್ದಾರೆ. ಇದರಲ್ಲಿ ಕಾಮಧೇನು ಹಣ್ಣಿನ ಸಂಸ್ಕರಣಾ ಸಂಸ್ಥೆಯವರು 323.27 ಎಕರೆ ಜಮೀನಿನಲ್ಲಿ ಅನಾನಸ್ ಬೆಳೆಸುವುದಕ್ಕೆ ಮತ್ತು ಕೃಷಿ ವರ್ಧನೆ ಯೋಜನೆ ಸಲುವಾಗಿ 247.20

ಎಕರೆ ಜಮೀನಿಗೆ ಸಹಾಯ ಧನ ಕೊಟ್ಟಿದ್ದೇವೆ. ಉಳಿದದ್ದನ್ನು ಅವರೇ ಬೆಳೆಸಿದ್ದಾರೆ. 8,41,300 ರೂಪಾಯಿಗಳನ್ನು ಕೃಷಿ ಅಭಿವೃದ್ಧಿ ವರ್ಧನೆ ಯೋಜನೆ ಮುಖಾಂತರ ಸಹಾಯ ಧನ ಕೊಟ್ಟಿದೆ.

ಶ್ರೀಮತಿ ರಾಧಾಭಟ್:—ನಮ್ಮ ಕಾರವಾರ ಜಿಲ್ಲೆಯಲ್ಲಿ ಯಾವ ಯಾವ ಸ್ಕೀಮನ್ನು ತೆಗೆದುಕೊಂಡಿದ್ದೀರಿ, ಮತ್ತು ಈ ಸ್ಕೀಮನ್ನು ನಮ್ಮ ಸಿರಸಿ ಮತ್ತು ಅಂಕೋಲ ತಾಲ್ಲೂಕುಗಳಲ್ಲಿ ಎಷ್ಟು ತೆಗದುಕೊಳ್ಳುತ್ತೀರಿ, ಮತ್ತು ಈ ವರ್ಷ ಎಷ್ಟನ್ನು ಕಾರ್ಯಗತಗೊಳಿಸುತ್ತೀರಿ.

ಶ್ರೀ ಕೆ. ಟಿ. ರಾಥೋಡ್.—ಕಾರವಾರ ಜಿಲ್ಲೆಯಲ್ಲಿ ಒಟ್ಟು 17 ಸ್ಕೀಮುಗಳನ್ನು ಸರಕಾರದವರು ಕಾರ್ಯಗತ ಮಾಡುತ್ತಿದ್ದಾರೆ. ಈ ಸ್ಕೀಮುಗಳ ವಿವರ ಈ ರೀತಿ ಇದೆ.

Fruit Development Scheme, Cardamom Development Scheme, Pepper Development Scheme, Practical Training for Rural Youths, Coconut Development Scheme, Plant Protection, Vegetable Development Scheme, Shemes for the Development of Vegetables in River Bed, Scheme for the control of on Coconut development, Subsidiary food for areca, Hybrid Pepper, Cashew, Multiplication of Pine apple scheme, and development of Areca and Coconut under A. R. C. ಇವುಗಳಲ್ಲಿ ಮೊದಲು ಫಿಜಿಕಲ್ ಟಾರ್ಗೆಟ್ ಏನೇನು ಮಾಡಿದ್ದೇವೆ ಇವುಗಳ ವಿವರ ಬಹಳ ದೊಡ್ಡದು ಇದೆ. ಇದನ್ನು ಹೇಳುವುದಕ್ಕೆ ಬಹಳ ಸಮಯವಾಗುತ್ತದೆ.

ಶ್ರೀಮತಿ ರಾಧಾಭಟ್.—ನಿರುದ್ಯೋಗ ಪದವೀಧರರಿಗೆ ಒಂದು ಅಥವಾ ಎರಡು ಎಕರೆ ಮಂಜೂರು ಮಾಡುತ್ತೇವೆ ಆದ್ದರಿಂದ ನಿರುದ್ಯೋಗ ಪದವೀಧರರು ಯಾರಾದರೂ ಮುಂದೆ ಬಂದರೆ ಅವರಿಗೆ ಅನಾನಸ್ ಬೆಳೆಯುವುದಕ್ಕೆ ಹಣ್ಣು ಹಂಪಲು ಬೆಳೆಯುವುದಕ್ಕೆ ಉತ್ತೇಜನ ಕೊಡುತ್ತೀರಾ ? ಮತ್ತು ಅವರಿಗೆ ಯಾವ ತರಹ ಸಹಾಯ ಮಾಡುತ್ತೀರಾ ಎನ್ನುವ ವಿವರವನ್ನು ತಿಳಿಸುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.— ಎಲ್ಲಾ ಸ್ಕೀಮುಗಳೂ ಕಾರ್ಯಗತವಾಗುತ್ತವೆ. ಇದರಲ್ಲಿ ಯಾರು ನಿರುದ್ಯೋಗಿ ಪದವೀಧರರು 2 ಎಕರೆ, 5 ಎಕರೆ ಜಮೀನನ್ನು ಇಟ್ಟುಕೊಂಡು ಈ ಯೋಜನೆಯನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುವರೋ ಅವರಿಗೆ ಸಹಾಯಧನ ಸಿಕ್ಕುತ್ತದೆ.